why should they not accept the proposal we have made? I request the Leader of the House as well as the opposite party to consider our proposal and give us a fair deal.

Mr. SPEAKER.—The question is:

"That Sri C. J. Muckannappa be elected as Deputy Speaker of the Legislative Assembly."

The motion was negatived.

Sri ALUR HANUMANTHAPPA.—Sir, I move:

"That Sri L. H. Thimma Bovi be elected as Deputy Speaker of the Legislative Assembly."

Sri D. T. SEETHARAMA RAO (Bhadravathi).—I second the motion.

Mr. SPEAKER.—The question is:

"That Sri L. H. Thimma Bovi be elected as Deputy Speaker of the Legislative Assembly."

The motion was adopted.

Mr. SPEAKER.—Sri L. H. Thimma Bovi is elected as Deputy Speaker of the Legislative Assembly.

ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಸ್ವಾಮಿ, ಈ ಸಭೆಯಲ್ಲಿ ಈಗ ಚುನಾವಣೆಯಾಗಿರತಕ್ಕ ವ್ಯಕ್ತಿಯ ಮೇಲೆ ಯಾವ ವಿಧವಾದ ಭಿನ್ನಾಭಿಪ್ರಾಯ ಏಿಲ್ಲ. ಆದರೆ ಸರ್ಕಾರದ ನೀತಿಯನ್ನು ವಿರೋಧಿಸು ಪುದಕ್ಕೋಸ್ಕರ ನಾನು ಮತ್ತು ನನ್ನ ಪಾರ್ಟಿಯವರು ಸಭಾತ್ಯಾಗ ಮಾಡುತ್ತೇವೆ.

[Sri B. K. Puttaramiya, followed by other members of his party, withdrew from the House.]

Sri C. M. ARUMUGHAM (Kolar Gold Fields—Scheduled Castes).—Sir, I have no dispute about the personality or qualifications of the Deputy Speaker. My dispute is that the Congress party while selecting the candidate for the Deputy Speakership should have consulted the party in oppo ition. The Congress in Madras was able to get the services of Sri Sivashanmugham Pillai as Speaker in the Madras Legislative Assembly though he was not a Congress man. He stood as an independent candidate and got the position of Speakership. Therefore, Sir, the Congress party here ought to have consulted the Opposition group in the matter of electing the Deputy Speaker. Therefore, Sir, with these few remarks I will withdraw from the House.

[Sri C. M. Arumugham then withdrew from the House.]

Felicitations to Deputy Speaker.

*Sri S. NIJALINGAPPA (Chief Minister).—Sir, I have great pleasure to give expression on the result of the election. Sri Thimma Bovi is known to this House for a fairly long number of years. He is one of our ardent, hard working and efficient young men. He is well educated. He was in Parliament—Rajya Sabha—where he did good work which was very creditable to him. Then he became a member of the Mysore Legislative Council and he was elected as Deputy Chairman of the Upper House where he did good work. After due consideration we had pleasure in proposing his name and we are very happy. I am sure he will uphold the dignity and prestige of the House.

The accusation made by some of our friends on the opposite side that this election or the people that have been elected will not be fair, I think, is wrong. Sir, you have been elected and they have had no occasion to say anything against you. On the other hand you have been more considerate to them than to us. Therefore no such accusation can be made.

I welcome Sri Thimma Bovi as Deputy Speaker of the House.

Mr. SPEAKER.—I am really happy that my friend Sri Thimma Bovi has been elected as Deputy Speaker. I welcome him heartily and I am sure that he will relieve me often in the discharge of my duties. I am also sure that he will prove himself very efficient. I request him to come and occupy the seat here (pointing to the first seat on the Opposition side).

(Sri Tare Gowda rose.)

ಅಧ್ಯಕ್ಷರು.-ಈ ಪ್ರಕಾರ ಮಾತನಾಡುವುದು ಪಾರ್ಲಮೆಂಟರಿ ಸಂಪ್ರದಾಯಕ್ಕೆ ಅಪ್ಪು ಹೊಂದಿಕೊಳ್ಳುವುದಿಲ್ಲ.

(Sri L. H. Thimma Bovi occupied the seat allotted to the Deputy Speaker).

ಶ್ರೀ ಎಲ್. ಎಚ್. ತಿಮ್ಮಾಬೋಪಿ (ಚಿಕ್ಕಮಗಳೂರು —ಅನುಸೂಚಿತ ಜಾತಿಗಳು).—ಸಭಾಧ್ಯಕ್ಷರೇ, ಮತ್ತು ಸರ್ವಮಾನ್ಯ ಸಭಾ ಸದಸ್ಯರೇ, ಈದಿವಸ ನನ್ನನ್ನು ಈ ವಿಧಾನ ಸಭೆಗೆ ಉಪಾಧ್ಯಕ್ಷನನ್ನಾಗಿ ಬಹುಮತದಿಂದ ಚುನಾಯಿಸಿರುವುದು ನನಗೆ ತುಂಬ ಸಂತೋಷವನ್ನುಂಟುಮಾಡಿದೆ. ಇಪ್ಪೆಲ್ಲವೂ ಮಾನ್ಯ ಸದಸ್ಯರ ಬೆಂಬಲ ಮತ್ತು ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ. ಈ ಸಭೆಯ ಮಾನ್ಯ ಸದಸ್ಯರನೇಕರಿಗೆ ನಾನು ಇದಕ್ಕಾಗಿ ಅಪಾರ ಋಣಿಯಾಗಿದ್ದೇನೆ. ನಾನು ಈ ಸಭೆಯ ಘನತೆ ಗೌರವಗಳನ್ನು ಕಾಪಾಡುವೆನೇ ಅಲ್ಲದೆ, ಈ ಸಭೆಯಲ್ಲಿ ಪಾರ್ಲಿಮೆಂಟರಿ ಸಂಪ್ರದಾಯವನ್ನೂ ಪರಿಪಾಲಿಸಿಕೊಂಡು ಬರುತ್ತೇನೆಂದು ತಮ್ಮೆಲ್ಲರಿಗೂ ಭರವಸೆ ಕೊಡುತ್ತೇನೆ.

BUDGET FOR 1957-58—DEMANDS FOR GRANTS

No 13. General Administration (Except the sub major heads B snd C) and No. 14. General Administration (State Legislature and Election Charges)

(Debate continued)

*ಶ್ರೀ ಎಫ್. ಎಚ್. ಮೊಹ್ಸಿನ್ (ಹುಬ್ಬಳ್ಳಿ ನಗರ).—ಮಾನ್ಯ ಸಭಾಪತಿಗಳೇ, ಸರ್ಕಾರದವರು ಸಭೆಯ ಮುಂದೆ ಮಂಡಿಸಿರುವ ಸಾಮಾನ್ಯ ಆಡಳಿತಕ್ಕೆ ಸಂಬಂಧಪಟ್ಟ ಮನವಿಯನ್ನು ಸಮರ್ಥಿಸಲು ನಾನು ನಿಂತಿದ್ದೇನೆ. ಈ ವಿಷಯವನ್ನು ಮಾತನಾಡುತ್ತಾ ವಿರೋಧ ಪಕ್ಷದ ಅನೇಕ ಸದಸ್ಯರು . . . .

ಶ್ರೀ ಕೆ. ಮಂಜಯ್ಯ ಶೆಟ್ಟಿ (ಬ್ಯೆಂದೂರು).— On a point of order, ಸ್ವಾಮಿ. ಇಲ್ಲಿ ನಾವುಗಳು ಬಹಳ ದೂರದಲ್ಲಿ ಕುಳಿತಿದ್ದೇವೆ. ಈಗ ಆ ಸ್ಥಳಗಳು (ವಿರೋಧಪಕ್ಷದ ಕಡೆಯವು) ಖಾಲಿಯಿದ್ದರೆ ನಾವಾದರೂ ಅಲ್ಲಿ ಕುಳಿತುಕೊಳ್ಳಲು ಅವಕಾಶವಿದೆಯೇ ?

ಅಧ್ಯಕ್ಷರು.—ತಾವು ಆ ಪಾರ್ಟಿಗೆ ಸೇರುವುದಾದರೆ ಕುಳಿತುಕೊಳ್ಳಬಹುದು.

ಶ್ರೀ ಎಫ್. ಎಚ್. ಮೊಹ್ಸಿನ್.—ಸಭಾಪತಿಗಳೇ, ನಿನ್ನೆಯ ದಿವಸ ವಿರೋಧಪಕ್ಷದ ಕೆಲವು ಸದಸ್ಯರು ವಾಡಿಕೆಯಂತೆ ಸರ್ಕಾರವನ್ನು ಕಡುತರವಾಗಿ ಟೀಕಿಸಿದ್ದಾರೆ. ಹಾಗೆ ಟೀಕಿಸುವಾಗ ಒಬ್ಬ ಸದಸ್ಯರು ಹರಿಜನರಿಗೆ ಕೊಡಲಾಗಿದ್ದ ಮಂತ್ರಿಗಳ ಸಂಖ್ಯೆಯನ್ನು ಸಹ ಟೀಕೆ ಮಾಡಿದರು. ಅವರು ಹೇಳುವಾಗ ಮೈಸೂರು ರಾಜ್ಯದಲ್ಲಿ ಹರಿಜನರು 50 ಲಕ್ಷದಷ್ಟಿದ್ದಾರೆ, ಅದಕ್ಕನುಗುಣವಾಗಿ ಮಂತ್ರಿಮಂಡಳದಲ್ಲೂ ಸಹ ನಾಲ್ಕೈದು ಹರಿಜನ ಮಂತ್ರಿಗಳಾದರೂ ಇರುವಂತೆ ಮಾಡಬೇಕಾಗಿತ್ತೆಂದು ಒಂದು ಸೂಚನೆಯನ್ನು ಕೊಟ್ಟರು. ಆದರೆ ವಾಸ್ತವವಾಗಿ ಜನಗಣತಿಯ ಪ್ರಕಾರ ಹರಿಜನರ ಸಂಖ್ಯೆ 15 ಲಕ್ಷದಷ್ಟು ಮಾತ್ರವಿದೆಯೆಂದು ನಾನು ಅವರಿಗೆ ತಿಳಿಯಪಡಿಸಲಿಚ್ಛಿಸುತ್ತೇನೆ. ಆ ಪ್ರಕಾರ ಅವರಿಗೆ ನಾಲ್ಕೈದು ಮಂತ್ರಿಸ್ಥಾನಗಳನ್ನು ಕೊಡುವುದು ಉಚಿತವಾಗಲಾರದು. ಮುಸ್ಲಿಮರ ಸಂಖ್ಯೆ 14 ಲಕ್ಷವೆಂದು ಹೇಳಿದ್ದಾರೆ. ಅದೂ ಸಹ ಸರಿಯಲ್ಲ. ಮುಸ್ಲಿಮರ ಸಂಖ್ಯೆ 20 ಲಕ್ಷದಷ್ಟಿದೆ. ಒಬ್ಬರು ಮಾತ್ರ ಮುಸ್ಲಿಂ ಮಂತ್ರಿಗಳಿದ್ದಾರೆ. ಹೀಗೆ ಹೇಳುತ್ತಿರುವಾಗ ನಾನೇನು ಮಂತ್ರಿಮಂಡಲದಲ್ಲಿ ಮುಸ್ಲಿಮರ ಸಂಖ್ಯೆಯನ್ನು ಹೆಚ್ಚಿಸಬೇಕೆಂಬ ಉದ್ದೇಶದಿಂದ ಹೇಳುತ್ತಿಲ್ಲ. ನಮ್ಮ ಜನಸಂಖ್ಯೆಯ ಪ್ರಕಾರ ನಮಗೆ ಒಂದೂಕಾಲು ಮಂತ್ರಿಗಳನ್ನು ಕೊಡಬೇಕೆಂದು ಹೇಳುತ್ತಿಲ್ಲ. ಮುಖ್ಯವಾಗಿ ಮಂತ್ರಿಗಳನ್ನು ನೇಮಕ ಮಾಡುವಾಗ ಜಾತಿಯವಾರು ಮಾಡಬೇಕೆಂದು ಹೇಳುವುದು ಸರಿಯಲ್ಲ. ನಮ್ಮದು ಪ್ರಜಾ ಪ್ರಭುತ್ವ ಸರ್ಕಾರ; ಜಾತ್ಯತೀತ ದೇಶ. ಆದ್ದರಿಂದ ಮಂತ್ರಿಗಳನ್ನು ಆರೀತಿ ಜಾತಿಯ ಆಧಾರದಮೇರೆಗೆ ಆರಿಸಿಲ್ಲ. ಹಾಗೆ ಆರಿಸದಿರುವುದು ನಮಗೆಲ್ಲ ಸಂತೋಷವನ್ನುಂಟುಮಾಡಿದೆ. ಈಗ ನಮ್ಮಲ್ಲಿ ಪ್ರಜಾಪ್ರಭುತ್ವ ಸರ್ಕಾರ ಇನ್ನೂ ಬಾಲ್ಯವಸ್ಥೆಯಲ್ಲಿರುವುದರಿಂದ, ಜನರ ಆಶಾಕಾಂಕ್ಷೆಗಳನ್ನು ಆದಷ್ಟುಮಟ್ಟಿಗೆ ಪೂರೈಸುವ ದೃಷ್ಟಿಯಿಂದ ನಮ್ಮ ಮುಖ್ಯಮಂತ್ರಿಗಳು ಜಾತಿಯ ಕಡೆ ಸ್ವಲ್ಪ ಲಕ್ಷ್ಯಕೊಟ್ಟಿದ್ದರೂ ತಪ್ಪಲ್ಲ. ಶ್ರೀಮಾನ್ ಆರ್ಮುಗಂ ಅವರ ಭಾಷಣದಿಂದಲೋ ಏನೋ ಈ ಹೊತ್ತು ಶ್ರೀಮಾನ್ ತಿಮ್ಮಾಬೋಪಯವರಿಗೆ ಡೆಪ್ಯುಟಿ ಸ್ಪೀಕರ ಸ್ಥಾನವನ್ನು ಕೊಟ್ಟಿದ್ದಾರೆ. ಇದರಿಂದ ಅವರು ಸಂತೃಪ್ತರಾಗುತ್ತಾರೆಂದು ನಂಬಿದ್ದೇನೆ.

ಆ ಮಾನ್ಯ ಸದಸ್ಯರು ಇನ್ನೂ ಮುಂದೆ ಹೋಗುತ್ತಾ, ಹರಿಜನರಿಗೆ ಸಾಮಾನ್ಯವಾಗಿ ಕೇವಲ ಸ್ಥಾನಿಕ ಶಾಖೆಯ ಮಂತ್ರಿಗಳ ಸ್ಥಾನವನ್ನು ಮಾತ್ರ ಕೊಡಲಾಗುತ್ತಿದೆಯೆಂದು ಹೇಳಿದರು. ನಾನು ಇದಕ್ಕೆ ಹೇಳಿಕೆ ಬಯಸುತ್ತೇನೆ, ಮಂತ್ರಿಗಳಿಗೆ ಕೊಡತಕ್ಕ ಶಾಖೆಗಳಲ್ಲಿ ಹೆಚ್ಚು ಕಡಿಮೆಯೆಂಬುದಿಲ್ಲ. ಏಕೆಂದರೆ ಅವರೆಲ್ಲ ಜಂಟಿ ಜವಾಬ್ದಾರಿ(joint responsibilty) ಯೆಂಬುದಿದೆ. ಯಾವುದೇ ಮಹತ್ವದ ವಿಷಯವನ್ನು ಚರ್ಚಿಸಬೇಕಾದರೂ ಎಲ್ಲರೂ ಕೂಡಿ ಚರ್ಚಿಸಿ ತೀರ್ಮಾನಿಸುತ್ತಾರೆ. ಆದ್ದರಿಂದ ಶಾಖೆಗಳಲ್ಲಿ ಕೀಳು ಮೇಲು ಎಂಬ ಭಾವನೆಗಳಿರಬೇಕಾಗಿಲ್ಲ.

ಇನ್ನೊಬ್ಬ ಸದಸ್ಯರು ಮಾತನಾಡುತ್ತಾ ಈ ವಿಧಾನ ಮಂಡಲವನ್ನೇ ವಿಸರ್ಜಿಸಬೇಕು, ದ್ವೇಶಕ್ಕೆಲ್ಲಾ ಒಂದು ಲೋಕಸಭೆಯಿದ್ದರೆ ಸಾಕೆಂದು ಅಭಿಪ್ರಾಯಪಟ್ಟರು. ಅವರು ಹೇಳಿದ್ದು, ಯಾವ ಮರದ ಮೇಲೆ ನಾವು ಕುಳಿತಿದ್ದೇವೋ ಆ ಮರದ ಬುಡಕ್ಕೇ ಕೊಡಲಿ ಪೆಟ್ಟುಹಾಕಿ ಕತ್ತರಿಸಿದಂತಿದೆ. ಮಾನ್ಯ ಸದಸ್ಯರು ಈ ಸಭೆಯಲ್ಲಿದ್ದು ಇದನ್ನೇ ವಿಸರ್ಜಿಸಬೇಕೆಂದು ಹೇಳಿದ್ದು ಬಹಳ ಶೋಚನೀಯ. ಅಲ್ಲದೆ ಹಿಂದೂಸ್ಥಾನ ಬಹಳ ದೊಡ್ಡ ದೇಶ. ಇದನ್ನೊಂದು ಉಪಖಂಡವೆಂತಲೇ ಕರೆಯುತ್ತಾರೆ. ಇದನ್ನು ವಿಭಾಗ ಮಾಡದೆ ಕೇಂದ್ರದಿಂದಲೇ ಆಡಳಿತ ನಡೆಸುವುದು ಬಹಳ ದುಸ್ತರ. ಅದೇ ದೃಷ್ಟಿಯಿಂದ ಪ್ರತಿ ರಾಜ್ಯವನ್ನೂ ವಿಭಾಗ ಮಾಡಿದ್ದಾಗಿದೆ. ದೇಶವನ್ನು ರಾಜ್ಯ ಘಟಕಗಳಿಂದ, ರಾಜ್ಯವನ್ನು ಜಿಲ್ಲಾ ಘಟಕಗಳಿಂದ, ಜಿಲ್ಲೆಯನ್ನು ತಾಲ್ಲೂಕು ಘಟಕಗಳಿಂದ ಆಳುವುದು ಒಂದು ವ್ಯವಸ್ಥಿತ ರೀತಿ. ಅದೇಪ್ರಕಾರ ಕೇಂದ್ರದಲ್ಲಿ ಲೋಕಸಭೆಯಿರುವಂತೆ ರಾಜ್ಯಗಳಲ್ಲಿ ವಿಧಾನಸಭೆ ಇರುವುದು ಅವಶ್ಯಕ. ವಿಧಾನ ಪರಿಷತ್ತಿನ ವಿಷಯವಾಗಿ ಹೇಳುವುದಾದರೆ, ಅದಿನ್ನೂ ವಾಗ್ವಾದದ ವಿಷಯ. ಕೆಲವರು ಬೇಕು ಎನ್ನುತ್ತಾರೆ ಇನ್ನು ಕೆಲವರು ಬೇಡವೆನ್ನುತ್ತಾರೆ. ಆದರೆ, ವಿಧಾನ ಸಭೆಯು ಮಾತ್ರ ಅವಶ್ಯಕವೆಂದು ಹೇಳುತ್ತೇನೆ.

ಅದೇರೀತಿ ಡಿವಿಜನಲ್ ಕಮಿಷನರುಗಳ ಹುದ್ದೆಯನ್ನು ತೆಗೆಯಬೇಕೆಂದು ಸೂಚಿಸಿದರು. ರಾಜ್ಯದ ವಿಧಾನ ಸಭೆಯನ್ನು ಯಾವಕಾರಣದಿಂದ ವಿಸರ್ಜಿಸಬೇಕೆಂದು ಹೇಳಿದರೋ ಅದೇ ಕಾರಣದಮೇಲೆ ಇದೂ ಬೇಡವೆಂದು ಅವರ ವಾದವಾಗಿದೆ.